ಇರದ ಹಂಗಿನ ಅನ್ನದ ತಿರುಗಾಟಕ್ಕೆ ಅವಳು ಒಪ್ಪಲೇ ಬೇಕಿತ್ತು.

★★★

ಹಲವು ದಿನಗಳ ಮಾಲತಿಯ ಮೂಕ ನರಳಾಟ ನೋಡಿ ಪುಟ್ಟತ್ತೆ,"ಮನೆ ಗೋಡೆ ಬಿರಕು ಬಂದು ಕುಸ್ದು ಬೀಳ್ವಾಂಗೆ ಆಯ್ದು. ಆನೂ ಒಂದಿನ ಆರಾಮಿದ್ರೆ ಮತ್ತೊಂದು ಗಳಿಗೇಲಿ ಹಾಸ್ಗೆ ಹಿಡ್ದು ಬಿಡ್ತೆ. ಮಗಳು ಪ್ಯಾಟೆ ಖೋಲಿಗೆ ಅಡಿಗೇಗೆ ವರಾತ ಹಿಡದ್ದಲೆ. ಹೋಗ್ಬಾ ದೇವ್ರಿದ್ದಾ ದೊಡ್ಡಂವ" ಎಂದು ತೀರ್ಮಾನ ತಿಳಿಸಿದಳು. ತಾನು ಹೇಳಲಾರದ ಮಾತನ್ನು ಪುಟ್ಟತ್ತೆ ಆಡಿ ಮಾಲತಿಗೆ ನಿರಾಳವಾಯಿತು. ಆದರೂ ಗುಣವಾಗದ ನೋವಾಗಿ ಅವಳ ಮಾತು ಒಳಗೇ ಉಳಿಯಿತು.

ದೇವಕಿ ತನ್ನ ಮನೆಗೆ ಕರೆದುಕೊಂಡು ಹೋಗಲು ಬಂದಾಗಿನಿಂದ ಪುಟ್ಟತ್ತೆ ತನ್ನ 'ಮಹಾ ನಿರ್ಗಮನ'ಕ್ಕೆ ತಯಾರಿ ನಡೆಸಿದ್ದಳು. ಗಂಡನ ತರುವಾಯ ತನ್ನ ಸುಪರ್ದಿಗೆ ಬಂದ ಮರದ ಕಪಾಟನ್ನು ದಿನಕ್ಕೆರಡು ಬಾರಿಯಾದರೂ ತೆರೆದು ಕುಬೇರನ ಐಸಿರಿಯನ್ನು ನೋಡುವಂತೆ ನಿಲ್ಲುವಳು. ಖಾನೆಗಳ ಮೂಲೆಯಲ್ಲಿ ಕಾಲಾಂತರದಿಂದ ಕೂತ ದಾಂಪತ್ಯದ ವಾಸನೆಗೆ ಕ್ಷಣಮಾತ್ರದಲ್ಲಿ ಮದುವಣಗಿತ್ತಿಯೊ ಬಾಣಂತಿಯೊ ಆಗುವಳು; ಅದೆಷ್ಟೊ ಮದುವೆ ನೋಡಿದ ಸೀರೆ, ದಾಗೀನನನ್ನು ಮೂಗಿನ ಹೋಲಿಕೆಯಿಂದ ತನ್ನಂತೆ ಕಾಣುತ್ತಾಳೆ ಎಂದೆನಿಸಿಕೊಳ್ಳುವ ಸಂಪದಾಗೆ ಕೊಡುವ ಆಸೆಯಾಗುತ್ತದೆ. ದೇವಕಿಯ ಮಕ್ಕಳಿಗೆ ಕೊಡಬಾರದೇಕೆ ಎಂದೂ ಅನಿಸುತ್ತದೆ. ರಾತ್ರಿ ಮಲಗಿದಲ್ಲೆ ಕಾಡುತ್ತವೆ: ಪ್ರೀತಿಯ ಮಂಚ; ಮನೆ ಬಾಗಿಲಿಗೆ ಚಿತ್ರದುರ್ಗದಿಂದ ಬಂದಿದ್ದ ಕುರುಬನಿಂದ ಗಂಡ ಕೊಂಡ ಕಂಬಳಿ ಹಾಸಿಗೆ; ತಿರುಮಲ, ದೇವಕಿ ಹೊಟ್ಟೆಗೆ ಬಂದದ್ದು ಅದರ ಮುಸುಕಿನಲ್ಲೆ. ಗೋಕರ್ಣ ದೇವರ ಪೀಠ; ಗೋಡೆಗೆ ಒಡೆದ ಕನ್ನಡಿ; ಗಂಡ ಅಂಗಿ ತೂಗಿಡುತ್ತಿದ್ದ ಗಿಳಿ ಗುಟ್ಟ; ಒಂಟಿ ನಳಿಕೆಯ ನಾಡ ಕೋವಿ; ಸ್ವರ್ಣವಲ್ಲಿ ಮಠದ ಗುರುಗಳ ಹಳೆಯ ಫೋಟೊ; ದಾರಕ್ಕೆ ನೇತು ಬಿದ್ದ ಬಗ್ಗೋಣ ಪಂಚಾಂಗ; ಕವಳ ಕುಟ್ಟುವ ಕುಟ್ಟಾಣಿ; ವರ್ಷಕ್ಕೊಮ್ಮೆ ಹೂಡುತ್ತಿದ್ದ ಬಚ್ಚಲೊಲೆ; ಒಡೆದ ಹಿಮ್ಮಡಿ ತಿಕ್ಕಲಿಕ್ಕಿರುವ ಸವೆದ ಕಲ್ಲು; ಉಣ್ಣಲು ಕೂರುತ್ತಿದ್ದ ಎಪ್ಪತ್ತಕ್ಕೂ ಹೆಚ್ಚು ವರ್ಷ ಹಳೆಯ ಒಳ್ಳಿನ ಸನಿಹದ ಜಾಗ. ಅವಳಿಗೆ ತನ್ನ ಪುಟ್ಟ ವಿಶ್ವ ನಶ್ವರ ಎನಿಸಿಹೋಯಿತು.

ಅವರು ಹೊರಟು ನಿಂತರು. ತಾನು ಈ ಮನೆಗೆ ಮರಳಿ ಬರುವ ಮೊದಲೇ ಸಾಯಬಹುದು; ಬಂದರೂ ಮನೆಜಮೀನು ಅನ್ಯರ ವಶದಲ್ಲಿರಬಹುದು ಎಂಬ ಕಲ್ಪನೆಗೇ ಪುಟ್ಟತ್ತೆಯ ಕಣ್ಣುಗಳು ತುಂಬಿಬಂದವು. ಅರ್ಧಗೋಡೆಯ ಅಪೂರ್ಣ ಮನೆಯ ನಡುವೆ ವ್ಯಾಕುಲತೆಯಲ್ಲಿ ನಿಂತು ಬಂದಳು; ಕೊಟ್ಟಿಗೆಯ ಕೆಂಪಿಯ ಜತೆ ಮಾತಾಡಿದಳು; ದೇವರಿಗೆ ದೀಪ ಹಚ್ಚಿ ಕೈ ಮುಗಿದು ಹಿತ್ತಲಿಗೆ ನಡೆದಳು. ಗಂಡ ನೆಟ್ಟ ತೆಂಗು ಮುಟ್ಟಿ ನಮಿಸಿದಳು. ಸಂಪದಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಬೇಡವೆಂದರೂ ಬಿಡದೆ ತಲೆಗೆ ಎಣ್ಣೆ ಸವರಿ ಕೂದಲು ಬಾಚಿ ಎರಡು ಜಡೆ ಹಣೆದು ಅಂಗುಷ್ಟುಕ್ಕೆ ಬಾಳೆನಾರು ಸುತ್ತಿ ಕಟ್ಟಿದ ಅಬ್ಬಲಿಗೆ ದಂಡೆಯನ್ನು ಹೇರಿದಳು. "ಅಜ್ಜಿ ಮರೆಯಡ" ಎಂದಳು. "ಎರ್ಡು ತಿಂಗಳ ಮಟ್ಟಿಗೆ ಹೋಯಿ ಪರತ್ ಇಲ್ಲಿಗೇ ಬಪ್ಪುದಪ್ಪ. ಎಂತ ರಂಪಾಟ ನಿಂದು" ಸಂಪದ ರೇಗಿದಳು. ದೇವಕಿಯ ಮಕ್ಕಳು ಅರ್ಥವಾಗದೆ ಅಳುಬುರುಕು ಮುಖಮಾಡಿ ನಿಂತಿದ್ದರು. "ಎನಗೆ ಒಂದು ಕವಳಿಗೆ ಬೆಲ್ಲ ಮಜ್ಜಿಗೆ ಕೊಡು" ಪುಟ್ಟತ್ತೆ ಮಾಲತಿಯ ಕೈಯಲ್ಲಿ ತರಿಸಿಕೊಂಡು ತೀರದ ಮಹಾ ದಾಹ ಬಾಧಿಸಿದಂತೆ ಗಟಗಟನೆ ಕುಡಿದಳು. "ಅಬೆ ಕುಂತ್ಕ" ಎಂದು ಅಡ್ಡ ಬಿದ್ದು ಹಣೆ ಪಾದದ ಮೇಲೆ ಒತ್ತಿ ದೇವಕಿ